


ಗುರು ಹೇಳಿದಷ್ಟು ಮುಗಿಸಲು ದಿನಕ್ಕೆ ಹದಿನಾಲ್ಕು ತಾಸು ಬೇಕಾಗುತ್ತಿತ್ತು. ದಿನಕ್ಕೆ ನಾಲ್ಕು ಘಂಟೆ ಮೌನ-ಧ್ಯಾನ- ಪ್ರಾಣಾಯಾಮ ಆಚರಿಸಿ ಗಂಟಲಿಗೆ ವಿಶ್ರಾಂತಿ ಕೊಡಬೇಕಿತ್ತು. ಗುರು ನೀಡಿದ ಮುಲೇಠಿ ಬೇರುಗಳನ್ನು ಜಗಿದು ಧ್ವನಿ ಪೆಟ್ಟಿಗೆಗೆ ಪುಷ್ಟಿ ಕೊಡಬೇಕಿತ್ತು. ಆಮೇಲೆ ಸ್ವಲ್ಪ ಸಮಯ ಉಳಿದರೆ ನಿದ್ರೆ. ಅದರ ನಡುವೆ ಚಿಲ್ಲಾ ಖಾನೆಗೆ ಉಸ್ತಾದರ ಭೇಟಿ ಇರುತ್ತಿತ್ತು. ಹೀಗಾಗಿ, ದಿನಕ್ಕೆ ಮೂರು ಘಂಟೆಗಿಂತ ಜಾಸ್ತಿ ನಿದ್ರೆ ಸಿಕ್ಕಿದ್ದೆ ಇಲ್ಲ. ನಿದ್ರೆ ಮಾಡಿದಾಗಲೂ ಮಾರವಾದ ವಾದಿ ಸಂವಾದಿ ಸ್ವರಗಳೇ ಕನಸಾಗಿ ಕಾಡಿ ಹೊಸಹೊಸ ಆಲಾಪ ಮತ್ತು ವಿನ್ಯಾಸಗಳನ್ನು ತೋರಿಸುತ್ತ ರಿಂಗಣಿಸಿ ಮಾರವಾದ ವ್ಯಸನ ಹೆಚ್ಚಿಸುತ್ತಿದ್ದವು. ಉಸ್ತಾದರಂತೆ ತನಗೂ ಮಾರವಾದ ಹುಚ್ಚು ಹತ್ತಿತೇ? ಉಸ್ತಾದರ ಉದ್ದೇಶವೇ ಅದು ಎಂದು ಅವನಿಗೆ ಅನ್ನಿಸತೊಡಗಿತ್ತು. ಬಂದಾಗಲೆಲ್ಲ ಸೋಹನಿ ಮತ್ತು ಪುರಿಯಾ ರಾಗವನ್ನು ತಪ್ಪಿಸಿಕೊಂಡು ಹೇಗೆ ಮಾರವಾ ಹಾಡಬೇಕು ಎಂದು ಚುಟುಕಾಗಿ ಹೇಳುವುದು ಮರೆಯುತ್ತಿರಲಿಲ್ಲ. ಆದರೆ, ಇಂದು ಸೋಹನಿರಾಗದ ಮಿಂಚಿನ ವೇಗದ ತಾನು ಕನಸಾಗಿ ಕಾಡಿ ಅವನನ್ನು ವಿಹ್ವಲನನ್ನಾಗಿಸಿತ್ತು. ಉಸ್ತಾದರು ಕೋಣೆಗೆ ಬೀಗ ಹಾಕಿಲ್ಲ. ಇನ್ನು ಸ್ವಲ್ಪ ಹೊತ್ತಿಗೆ ಸೋಹನಿಯು ನದಿಯ ಬಳಿ ನೀರಿಗೆ ಬರುವ ಹೊತ್ತು. ಅತ್ತ ಹೋಗಿ ಬಿಡೋಣವೇ? ಎಂದು ಒಮ್ಮೆ